ಅಕ್ರಮ ಮರಳು

664(1292); ಶ್ರೀ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ವಶಪಡಿಸಿಕೊಳ್ಳುವ ಅಕ್ರಮ ಮರಳು ದಾಸ್ತಾನುಗಳನ್ನು ಏನು ಮಾಡಲಾಗುವುದು;

ಆ) ಇದನ್ನು ಸಾರ್ವಜನಿಕರಿಗೆ ಮಾರಾಟ ಮಾಡುವುದಾದರೆ ಯಾವ ಬೆಲೆಗೆ ಮಾರಲಾಗುತ್ತದೆ; ಕಡಿಮೆ ಬೆಲೆಗೋ ಅಥವಾ ಮಾರುಕಟ್ಟೆ ಬೆಲೆಗೋ;

ಇ) ರಾಜ್ಯದ ವಿವಿಧ ಭಾಗದಲ್ಲಿ ಕಾರ್ಯಾಚರಣೆ ಮೂಲಕ ವಶಪಡಿಸಿಕೊಂಡ ಮರಳನ್ನು ಸಾರ್ವಜನಿಕರಿಗೆ ವಿತರಿಸುವಂತೆ ಜಿಲ್ಲಾಧಿಕಾರಿಗಳು ಆದೇಶಿಸಿದ್ದರೂ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ವಿತರಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಅಕ್ರಮ ಮರಳು ಸಾರ್ವಜನಿಕರಿಗೆ ವಿತರಿಸದೇ ಹಾಗೆ ಉಳಿಸಿಕೊಂಡಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಇಲಾಖೆ ಕೈಗೊಳ್ಳುವ ಕ್ರಮ ಏನು;

ಉ) ನಿರ್ಮಾಣ ಕಾಮಗಾರಿಗಳಿಗೆ ಅವಶ್ಯಕ ಮರಳು ಪೂರೈಕೆಯನ್ನು ಲೋಕೋಪಯೋಗಿ ಇಲಾಖೆ ಮೂಲಕವೇ ವಿತರಿಸುವ ನಿಯಮ ಹೊಸ ಮರಳು ನೀತಿಯಲ್ಲಿ ಇದೆಯೇ; ಹೌದಾದರೆ ವಿತರಿಸುವುದು;

ಊ) ಕಳೆದ ಎರಡು ವರ್ಷದಲ್ಲಿ ಇಲಾಖೆಯು ಎಷ್ಟು ಕಡೆ ಅಕ್ರಮ ಮರಳು ಗಣಿಗಾರಿಕೆಯನ್ನು ನಿಲ್ಲಿಸಿದೇ ಇದರಿಂದ ಆಗಿರುವ ಸಾಧಕ–ಬಾಧಕವನ್ನು ವಿವರಿಸುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ 357 ಎಂಎಂಎನ್ 2012 ದಿನಾಂಕ:16–12–2003ರ 31 U ಪ್ರಕಾರ ಅಕ್ರಮ ಮರಳನ್ನು ವಿಲೇವಾರಿ ಮಾಡಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗುತ್ತದೆ.

"Sand found to be stored illegally/uanloaded from overloaded sand transporting vehicle shall be confiscated in presence of any two members of the Committees through mahajar and be handed over to the jurisdictional Assistant Executive Engineer, PWD or to his representative who in turn dispose on the prevailing rates with Mineral Dispatch Permit by local sales and shall apportion the proceeds in accordance with sub-rule (7) of rule 31R"

ಆ) ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯದ ಅಧಿಸೂಚನೆ ಸಂಖ್ಯೆ: ಸಿಐ 357 ಎಂಎಂಎನ್ 2012, ದಿ: 16.12.2013ರಂತೆ ಮರಳು ನೀತಿ ಜಾರಿಗೆ ಬಂದಿದ್ದು, ಸದರಿ ಮರಳು ನೀತಿಯ ನಿಯಮ/ ಮಾನದಂಡಗಳಂತೆ ಲೋಕೋಪಯೋಗಿ ಇಲಾಖೆಯ ಸಂಬಂಧಪಟ್ಟ ವಲಯಗಳ ವ್ಯಾಪ್ತಿಯಲ್ಲಿ ಜಿಲ್ಲಾ ಮರಳು ಉಸ್ತುವಾರಿ ಸಮಿತಿಯಿಂದ ನಿಗದಿಪಡಿಸಲಾಗಿರುವ ದರದಂತೆ ಗ್ರಾಹಕರಿಗೆ ಮರಳು ಮಾರಾಟ ಮಾಡಿ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

ಈ) ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದರೆ ಅಕ್ರಮ ಮರಳನ್ನು ಸಾರ್ವಜನಿಕರಿಗೆ ವಿತರಿಸದೇ ಹಾಗೇ ಉದ್ದೇಶಪೂರ್ವಕವಾಗಿ ಉಳಿಸಿಕೊಂಡಿದ್ದ ಸಂದರ್ಭಗಳಲ್ಲಿ ಅಂತಹ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಆಯಾ ಜಿಲ್ಲೆಯ ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳ

ವರದಿಯ ಆಧಾರದ ಮೇಲೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು

ಊ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿಐ357 ಎಂಎಂಎನ್ 2012 ದಿ: 16–12–2013ರಂತೆ ನೂತನ ಮರಳು ನೀತಿ ಜಾರಿಗೆ ಬಂದಿದ್ದು, ಸದರಿ ಮರಳು ನೀತಿಯ ನಿಯಮ/ ಮಾನದಂಡಗಳಂತೆ ಸೆಕ್ಷನ್ 18ರ 1(ಬಿ)ರ ಪ್ರಕಾರ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳಿಗೆ ನಿರ್ದಿಷ್ಟವಾದ ಕರ್ತವ್ಯ ಮತ್ತು ಜವಾಬ್ದಾರಿಯನ್ನು ನಿಗಧಿಪಡಿಸಿದ್ದು, ಅದರಂತೆ, ಮರಳನ್ನು ಪೂರೈಸಲು ವಿವಿಧ ಇಲಾಖೆಗಳು ಕ್ರಮ ಕೈಗೊಳ್ಳುತ್ತಿವೆ. ನಿಯಮ 31 R (1B) (V) ರಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯವನ್ನು ಈ ಕೆಳಕಂಡಂತೆ ವಿವರಿಸಿದೆ.

"on obtaining environmental clearance and reservation of blocks the Executive Engineer, Public Works Dept in the District shall be proceed with the tendering process and deal with the extraction, transportation storage and disposal at the rate fixed by the District Committee through Mineral Dispatch Permit."

ಋ) ಸರ್ಕಾರದ ಆದೇಶ ಸಂ: ಸಿಐ 357 ಎಂಎಂಎನ್ 2012 ದಿ: 16.12.2013ರಂತೆ ಜಾರಿಗೊಂಡಿರುವ ಮರಳು ನೀತಿಯಂತೆ ತಾಲ್ಲೂಕು ಮಟ್ಟದ ಮರಳು ಉಸ್ತುವಾರಿ ಸಮಿತಿ ಸದಸ್ಯರು ಹಾಗೂ ಜಿಲ್ಲಾ ಮಟ್ಟದ ಮರಳು ಉಸ್ತುವಾರಿ ಸಮಿತಿಯ ಸದಸ್ಯರು ಅಕ್ರಮ ಮರಳು ಗಣಿಗಾರಿಕೆ, ಅನಧಿಕೃತ ಮರಳು ಸಾಗಾಣಿಕೆ ಹಾಗೂ ಶೇಖರಣೆಯನ್ನು ಗುರುತಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲು ಅಧಿಕಾರ ಹೊಂದಿದ್ದು, ಅದರಂತೆ, ಸದರಿ ಸಮಿತಿಯ ವತಿಯಿಂದ

ಮರಳನ್ನು ವಶಪಡಿಸಿಕೊಂಡು ಅವರ ವಿರುದ್ಧ ನಿಯಮಾನುಸಾರ ಕಾನೂನುಬದ್ದವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಪ್ರಕಾರ್ಯಕ್ಕೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಆದಾಗ್ಯೂ ಅಂಕಿಅಂಶಗಳ ವಿವರಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿರುತ್ತದೆ.

ಮುಂದುವರೆದು, ಮರಳು ಅವ್ಯವಹಾರವನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1) ಮರಳು ಸಾಗಾಣಿಕೆ ಮಾಡಲು ಪರ್ಮಿಟ್ ಕುರಿತಾಗಿ ಏಕರೂಪದ ಹೊಸ ತಂತ್ರಾಂಶ ರೂಪಿಸಲು ಹಾಗೂ ಬಾರ್‌ಕೋಡ್ ಇರುವ SSPP Sheet ಗಳಲ್ಲಿ ಮರಳು ಪರವಾನಗಿಗಳನ್ನು ವಿತರಿಸಲು ದಿ: 1.6.2014 ರಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಮರಳು ಸ್ಟಾಕ್‌ಯಾರ್ಡ್‌ಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

2) ಮರಳು ಸಾಗಾಣಿಕೆ ರಸ್ತೆಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಪೊಲೀಸ್, ಕಂದಾಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಗತ್ಯ ಸಿಬ್ಬಂದಿಗಳೊಂದಿಗೆ ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟುವಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

3) ಜಿಪಿಎಸ್ ಅಳವಡಿಸಿರುವ ವಾಹನಗಳಿಗೆ ಮಾತ್ರ ಮರಳು ಸಾಗಾಣಿಕೆ ಮಾಡಲು ಪರವಾನಗಿ ನೀಡಲಾಗುತ್ತಿದೆ. ಮರಳು ವಿತರಣಾ ವ್ಯವಸ್ಥೆಯನ್ನು ಆನ್‌ಲೈನ್ ಪರ್ಮಿಟ್ ಮೂಲಕ ನೀಡುವುದಕ್ಕಾಗಿ ಗಣಕೀರಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

4) ಲೋಕೋಪಯೋಗಿ ಇಲಾಖೆಯ ರಸ್ತೆ ಕಾಮಗಾರಿಗಳಿಗೆ Blast furnance slag sand ನ್ನು ಬಳಸಲು ದಿ: 23.5.2014ರಂದು ಆದೇಶ ಹೊರಡಿಸಲಾಗಿದೆ.

5) ನೈಸರ್ಗಿಕ ಮರಳಿನ ಬದಲಾಗಿ ಉತ್ಪಾದಿತ ಮರಳನ್ನು ಉಪಯೋಗಿಸಲು ಉತ್ತೇಜನ ಕ್ರಮಗಳನ್ನು ಕೈಗೊಳ್ಳಲಾಗಿದೆ. (M-sand)

ಅಕ್ರಮ ಮರಳು ದಂಧೆ ಹಾಗೂ ಗಣಿಗಾರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಬಯಲುಸೀಮೆ ಸಣ್ಣ ಹಿಡುವಳಿದಾರರಿಗೆ ಕೃಷಿ ಭಾಗ್ಯದ ಅನುಕೂಲಗಳು

665(1293); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಕೃಷಿ ಭಾಗ್ಯ ಯೋಜನೆ ಬಯಲು ಸೀಮೆಯ ಸಣ್ಣ ಹಿಡುವಳಿದಾರ ರೈತರಿಗೆ ವರದಾನವಾಗಲಿದೆ ಎಂಬುದು ನಿಜವೇ; ಹೌದಾದರೆ ಯಾವ ರೀತಿ ಅನುಕೂಲ ಇದೆ ವಿವರಿಸುವುದು;

ಆ) ಕೃಷಿ ಭಾಗ್ಯ ಯೋಜನೆಯಡಿ ಬಯಲು ಸೀಮೆ ಭಾಗದ ರೈತರಿಗೆ ಸಿಗುವ ಲಾಭ ಏನು; ಅದನ್ನು ಅವರು ಯಾವ ರೀತಿ ಪಡೆದುಕೊಳ್ಳಬೇಕು;

ಇ) ಚಿಕ್ಕಬಳ್ಳಾಪುರ ಜಿಲ್ಲೆ ಕೂಡ ಬಯಲು ಸೀಮೆ ಜಿಲ್ಲೆಯಾಗಿದ್ದು, ಬರಪೀಡಿತ ಜಿಲ್ಲೆಯಾಗಿದ್ದು, ಕೃಷಿ ಭಾಗ್ಯ ಯೋಜನೆಯಡಿ ವಿಶೇಷ ಸೌಕರ್ಯ ಸಿಗಲು ಸಾಧ್ಯವೇ;

ಈ) ಬಾಡಿಗೆ ಆಧಾರಿತ ಸೇವಾ ಕೇಂದ್ರಗಳು ಯಾವ ರೀತಿ ಕಾರ್ಯನಿರ್ವಹಿಸುತ್ತವೆ; ಇಲ್ಲಿ ಸಿಗುವ ಮಾಹಿತಿ ಏನು;

ಉ) ರಾಜ್ಯದಲ್ಲಿ ಎಲ್ಲೆಲ್ಲಿ ಈ ಕೇಂದ್ರಗಳು ಸ್ಥಾಪನೆಯಾಗಿವೆ; ಇನ್ನೆಷ್ಟು ಕೇಂದ್ರಗಳು ಮುಂದಿನ ಒಂದು ವರ್ಷದಲ್ಲಿ ಬರಲಿವೆ;

ಊ) ಕೃಷಿ ಭಾಗ್ಯ ಯೋಜನೆಯ ಕುರಿತು ಮಾಹಿತಿ ಪಡೆಯಲು ಯಾರನ್ನು ಸಂಪರ್ಕಿಸಬೇಕು?